ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಕೇಳಿದಮೇಲೆ ಬರುವುದಾದರೆ ಹೇಗೆ? ಏನಾದರೂ ಸಂಪ್ರದಾಯವನ್ನು ತಾವು ಮಾಡಬೇಕು.

ಅಧ್ಯಕ್ಷರು : ಸರ್ಕಾರದವರು ಒಂದು ಗಂಟೆ ಮುಂಚೆ ನಮಗೆ ಕಳುಹಿಸಬೇಕು ತಾನೆ?

ಶ್ರೀ ಎಸ್.ಹೆಚ್. ಕೌಜಲಗಿ : ನಮ್ಮ ಅನ್‌ಸ್ಟಾರ್ಡ್ ಪ್ರಶ್ನೆಗಳಿಗೂ ಉತ್ತರ ಒಟ್ಟಾಗಿ ಬರುವುದಿಲ್ಲ ನಿನ್ನೆ ಮೊನ್ನೆ ಅಷ್ಟಷ್ಟು ಬಂದಿವೆ.

ಶ್ರೀ ಎಸ್.ಎಂ. ಯಾಹ್ಯಾ : ಮಾನ್ಯ ಅಧ್ಯಕ್ಷರೆ ಹಳೆಯ ಪದ್ಧತಿಯೇ ಬಹಳ ಉತ್ತಮವಾಗಿತ್ತು ಎಂದು ಕಾಣಿಸುತ್ತದೆ ಏಕೆಂದರೆ ಕೆಲವು ಸಂದರ್ಭಗಳಲ್ಲಿ ಉತ್ತರಗಳು ಸಿಕ್ಕುತ್ತವೆ. ಇನ್ನು ಕೆಲವು ಸಂದರ್ಭಗಳಲ್ಲಿ ಉತ್ತರಗಳು ಸಿಕ್ಕುವುದಿಲ್ಲ ಹಳೆಯ ಪದ್ಧತಿ ಏನಿತ್ತು ಎಂದರೆ ಪ್ರಶ್ನೆ ಮತ್ತು ಅದರ ಕೆಳಗೇ ಉತ್ತರಗಳೂ ಇರುತ್ತಿದ್ದುವು ಆದ್ದರಿಂದ ಎಲ್ಲ ಮಾನ್ಯ ಸದಸ್ಯರಿಗೂ ಸಹಾಯವಾಗುತ್ತಿತ್ತು. ಆದ್ದರಿಂದ ಮತ್ತು ಹಳೆಯ ಪದ್ಧತಿಯನ್ನೇ ಜಾರಿಗೆತರುವುದು ಉತ್ತಮ ಎಂದು ನಾನು ಅಂದುಕೊಂಡಿದ್ದೇನೆ.

ಅಧ್ಯಕ್ಷರು : ಇದನ್ನು ಗಮನದಲ್ಲಿಟ್ಟುಕೊಳ್ಳಲಾಗುತ್ತದೆ

ಸಿದ್ದಾಪುರ ಮಂಡಲ ಪಂಚಾಯಿತಿಯಲ್ಲಿ ರಾಷ್ಟ್ರ ಧ್ವಜಕ್ಕೆ ಅವಮಾನ

3239 - ಶ್ರೀ ಗೋಪಾಲ ಮುಕುಂದ ಕನಾಡೆ (ಸಿರ್ಸಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಿದ್ದಾಪುರ ಮಂಡಲ ಪಂಚಾಯತದಲ್ಲಿ ಕಳೆದ ಸ್ವಾತಂತ್ರೋತ್ಸವ ಸಮಾರಂಭದಲ್ಲಿ ರಾಷ್ಟ್ರಧ್ವಜವನ್ನು ತಲೆಕೆಳಕಾಗಿ ಹಾರಿಸಿ ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ ಈ ಬಗ್ಗೆ ಸಂಭಂದಪಟ್ಟ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು)

ಅ) ಹೌದು

ಆ) ರಾಷ್ಟ್ರಧ್ವಜವನ್ನು ಆ ರೀತಿ ತಲೆಕೆಳಕಾಗಿ ಹಾರಿಸಿದ್ದು ಮುನ್ನೆಚರಿಕೆಯಿಲ್ಲದೆ ಮಾಡಿದ ತಪ್ಪಾಗಿದ್ದು ಅದನ್ನು ಕೂಡಲೇ ಸರಿಪಡಿಸಲಾಯಿತೆಂದು ವರದಿಯಾಗಿದೆ. ಆದರೂ ಸಂಭಂದಪಟ್ಟ ನೌಕರರ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಗೋಪಾಲ ಮುಕಂದ ಕಾನಡ್ : ಮಾನ್ಯ ಅಧ್ಯಕ್ಷರೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತದೆಂದು ಕೊಟ್ಟಿದ್ದಾರೆ. ಕ್ರಮ ಎಂದರೆ ಅವರನ್ನು ಅಮಾನತ್ತಿನಲ್ಲಿ ಇಡುತ್ತಾರೆಯೆ?

ಶ್ರೀ ಎಸ್. ಬಂಗಾರಪ್ಪ : ಬಾವುಟವನ್ನು ಹಾಕುವಾಗ ಅದನ್ನು ಸ್ವಲ್ಪ ಹೆಚ್ಚೂ ಕಡಿಮೆ ಹಾಕಿದ್ದರು ಎನ್ನುವ ಬಗ್ಗೆ ಬಂದಿರತಕ್ಕ ದೂರು ಇದರ ಬಗ್ಗೆ ವಿವರಗಳನ್ನು ನಾವು ತರಿಸಬೇಕಾಗುತ್ತದೆ ಏಕೆಂದರೆ ಬಾವುಟವನ್ನು ತಿರುಗುಮುರುಗು ಮಾಡಿ ಹಾಕಿದ್ದರೂ ಕೂಡ ತಪ್ಪಾಗುತ್ತದೆ. ತಪ್ಪು ತಪ್ಪೇ ಆರೀತಿ ಏತಕ್ಕೆ ಹಾಕಿದರು ಎನ್ನ ತಕ್ಕ ಬಗ್ಗೆ ವಿವರಗಳನ್ನು ತರಿಸಿಕೊಂಡು ಅದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಈಗಾಗಲೇ ತಿಳಿಸಿದ್ದೇವೆ ಮತ್ತು ಉತ್ತರದಲ್ಲಿಯೂ ಕೂಡ ನಾವು ಕೊಟ್ಟಿರತಕ್ಕದ್ದು ಸರಿಯಾಗಿದೆ.

ಶ್ರೀಮತಿ ರೇಣುಕಾ ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ ನನ್ನ ಚು.ಪ್ರ 3193ಕ್ಕೆ ಅಚ್ಚಾದ ಉತ್ತರಗಳು ನನ್ನ ಮುಂದಿಲ್ಲ ಅಂದಮೇಲೆ ನಾನು ಕಲ್ಪನೆ ಮಾಡಿಕೊಂಡು ಉಪ ಪ್ರಶ್ನೆಗಳನ್ನು ಕೇಳಬೇಕೆ?

ನಾನು ಇಲ್ಲಿ ಹುಡುಕಿದರೂ ನನ್ನ ಪ್ರಶ್ನೆಗೆ ಉತ್ತರಗಳಿಲ್ಲ ಉಪ ಪ್ರಶ್ನೆಗಳನ್ನು ಕೇಳಬೇಕೆ? ನಾನು ಇಲ್ಲಿ ಹುಡುಕಿದರೂ ಪನ್ನ ಪ್ರಶ್ನೆಗೆ ಉತ್ತರಗಳಿಲ್ಲ ಉಪ ಪ್ರಶ್ನೆಗಳನ್ನು ನಾನು ಹೇಗೆ ಕೇಳಬೇಕೋ ಗೊತ್ತಾಗುತ್ತಿಲ್ಲ.

ಅಧ್ಯಕ್ಷರು : ಈಗ ಕೇಳಿ.

ಶ್ರೀಮತಿ ರೇಣುಕಾ ರಾಜೇಂದ್ರನ್ : ನನ್ನ ಪ್ರಶ್ನೆಯನ್ನು ಕೊನೆಯಲ್ಲಿ ತೆಗೆದುಕೊಳ್ಳಿ.

ಅಧ್ಯಕ್ಷರು : ನಿಮ್ಮದು ಬಹಳ ಸಿಂಪಲ್ ಕ್ವಶ್ಚನ್ ಕೊಳಚೆ ನಿರ್ಮೂಲನಾ ಮಂಡಲಿಗೆ ಸಂಬಂಧಪಟ್ಟಂತೆ ಕೇಳಿದ್ದೀರಿ

ಶ್ರೀಮತಿ ರೇಣುಕಾರಾಜೇಂದ್ರನ್ : ಅಲ್ಲಿ 80 ಮನೆಗಳನ್ನು ಕಟ್ಟಿದ್ದಾರೆ....

ಅಧ್ಯಕ್ಷರು : ಮಂತ್ರಿಗಳ ಉತ್ತರದಿಂದ ನಿಮಗೆ ಸಮಾಧಾನವಾಗಿದ್ದರೆ ಉಪಪ್ರಶ್ನೆಗೆ ಅವಕಾಶವೇ ಇರುವುದಿಲ್ಲ.

ಶ್ರೀಮತಿ ರೇಣುಕಾ ರಾಜೇಂದ್ರನ್ : 1985-86ನೇ ಸಾಲಿನಲ್ಲಿ ಪ್ರಾರಂಭ ಮಾಡಿದ ಮನೆಗಳು ಇನ್ನೂ ಪೂರ್ಣವಾಗಿಲ್ಲ ಎಂದು ಹೇಳಿದ್ದಾರೆ ಸುಮಾರು 82 ಮನೆಗಳ ಪೈಕಿ ಕಳೆದ ವರ್ಷದಲ್ಲಿ ಬಿದ್ದ ಭಾರಿ ಮಳೆಯ ಪರಿಣಾಮದಿಂದಾಗಿ 22 ಮನೆಗಳು ಶಿಥಿಲವಾಗಿವೆ ಎಂದು ಹೇಳಿದ್ದಾರೆ. ವಾಸ್ತವವಾಗಿ ಯಾವ ಮನೆಗಳೂ ಅಲ್ಲಿ ಪೂರ್ಣವಾಗಿಲ್ಲ ಯಾವ ಮನೆಯೂ ಕೂಡ ಹಂಚಿಕೆಯಾಗಿಲ್ಲ. ಇವರು ಕೊಟ್ಟಿರತಕ್ಕ ಉತ್ತರ ಸಮಂಜಸವಾಗಿಲ್ಲ ಅದ್ದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಸ್ಪಷ್ಟೀಕರಣವನ್ನು ಕೊಡಬೇಕು.

ಶ್ರೀ ಡಿ.ಕೆ. ಶಿವಕುಮಾರ್ : ಒಟ್ಟು 146 ಮನೆಗಳನ್ನು ತೆಗೆದುಕೊಂಡಿದೆ. ಅದರಲ್ಲಿ 64 ಮನೆಗಳನ್ನು ಬಾಪೂಜಿ ಕಾಲೋನಿಯಲ್ಲಿ 82 ಮನೆಗಳನ್ನು ಚಾಮರಾಜಪೇಟೆ ಎ.ಕೆ. ಕಾಲೋನಿಯಲ್ಲಿ ತೆಗೆದುಕೊಂಡಿದೆ. 1985-86ರಲ್ಲಿ ಕೆಲಸ ಪ್ರಾರಂಭವಾಯಿತು. ಮಾನ್ಯ ಸದಸ್ಯರು ಹೇಳಿದಂತೆ 22 ಮನೆಗಳು ಆ ಪೈಕಿ ಶಿಥಿಲವಾಗಿವೆ ಇದು ಅವರ ಮೂಲ ಸಮಸ್ಯೆ ಅಂದರೆ ಈ 22 ಮನೆಗಳನ್ನು ಯಾವಾಗ ತಾವು ರಿಪೇರಿ ಮಾಡಿಸುತ್ತೀರಿ ಎಂದು ಕೇಳಿದ್ದಾರೆ ಬೋರ್ಡ್‌ನವರು ಇದಕ್ಕೆ ಒಂದು ಹೊಸದಾಗಿ ಅಂದರೆ 4.63 ಲಕ್ಷ ರೂ.ನ ಒಂದು ಅಂದಾಜನ್ನು ತಯಾರಿಸಿ 13-8-91ರಲ್ಲಿ ಅದಕ್ಕೆ ತನ್ನ ಒಪ್ಪಿಗೆಯನ್ನೂ ಕೊಟ್ಟಿದೆ ಸಧ್ಯಕ್ಕೆ ವಿಜಿನ್ನಿಯನ್ನು ಫಿಕ್ಸ್ ಮಾಡಿ ಕೆಲಸವನ್ನು ಪ್ರಾರಂಭ ಮಾಡಬೇಕಾಗಿದೆ. ಆದಷ್ಟೂ ಜರೂರಾಗಿ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀಮತಿ ರೇಣುಕಾ ರಾಜೇಂದ್ರನ್ : ಈ ಮನೆಗಳನ್ನು ಯಾವಾಗ ಹಂಚಿಕೆ ಮಾಡಿದರು. ಮತ್ತು ಎಷ್ಟು ಜನರಿಗೆ ಮಾಡಿದರು ಎಂಬ ಅಂಕಿಅಂಶಗಳನ್ನು ಕೊಡಬೇಕು.

ಶ್ರೀ ಡಿ.ಕೆ. ಶಿವಕುಮಾರ್ : ಈ 22 ಮನೆಗಳನ್ನು ಬಿಟ್ಟು ಉಳಿದ ಮನೆಗಳಲ್ಲಿ ಅವರವರು ಸೇರಿಕೊಂಡು ಪೊಸಿಷನ್‌ನಲ್ಲಿದ್ದಾರೆ. ಅವರು ಅನಧಿಕೃತವಾಗಿ ಸೇರಿಕೊಂಡಿದ್ದಾರೆ ನಾವು ಈ ಬಗ್ಗೆ ಈಗಾಗಲೇ ಅವರಿಗೆಲ್ಲಾ ಕಾಗದವನ್ನು ಬರೆದು ನೀವು ಅನಧಿಕೃತವಾಗಿ ಈ ಮನೆಗಳಿಗೆ ಸೇರಿಕೊಂಡಿದ್ದೀರಿ ನೀವು ಮೊದಲು ಅರ್ಜಿಗಳನ್ನು ಹಾಕಿಕೊಳ್ಳಿ

ಡಿಪಾಜಿಟ್ ಅನ್ನು ಕಟ್ಟಿ ಎಂದು ತಿಳಿಸಿದ್ದೇವೆ. ಆದರೆ ಇವತ್ತಿನವರೆಗೂ ಒಬ್ಬರೂ ಕೂಡ ಅರ್ಜಿಗಳನ್ನೂ ಹಾಕಿಕೊಂಡಿಲ್ಲ ಡಿಪಾಜಿಟನ್ನೂ ಕಟ್ಟಿಲ್ಲ ಅನಧಿಕೃವಾಗಿ ಅವರು ಈ ಮನೆಗಳಿಗೆ ಸೇರಿಕೊಂಡಿದ್ದಾರೆ ಈ ವಿಚಾರದಲ್ಲಿ ಮಾನ್ಯ ಸದಸ್ಯರು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಮಾತನಾಡಿದ್ದಾರೆ. ಈ 22 ಮನೆಗಳನ್ನು ಬಿಟ್ಟು ಉಳಿದವುಗಳಿಗೆ ಯಾರ್ಯಾರು ಅರ್ಜಿಗಳನ್ನು ಹಾಕಿಕೊಳ್ಳುತ್ತಾರೆ ಡಿಪಾಜಿಟ್‌ನ್ನು ಕಟ್ಟುತ್ತಾರೆ ಅವರಿಗೆಲ್ಲಾ ಕೂಡಲೇ ಹಕ್ಕುಪತ್ರವನ್ನು ಕೊಡುತ್ತೇವೆ.

ಶ್ರೀಮತಿ ರೇಣುಕಾ ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ ಈ ಮನೆಗಳ ಹಂಚಿಕೆ ಆಗಿದೆಯೇ? ಇಲ್ಲವೇ? ಎನ್ನುವ ಬಗ್ಗೆ ನಾನು ಸ್ಪಷ್ಟವಾಗಿ ಕೇಳಿದ್ದೇನೆ. ಅದಕ್ಕೆ ಮಾನ್ಯ ಮಂತ್ರಿಗಳು ಹೇಳುತ್ತಾರೆ ಮನೆಗಳ ಹಂಚಿಕೆ ಮಾಡಿದ್ದೇವೆ. ಆದರೆ ಈ 22 ಮನೆಗಳನ್ನು ಮಾತ್ರ ಕೊಟ್ಟಿಲ್ಲ ಎಂದು ನನಗೆ ತಿಳಿದಮಟ್ಟಿಗೆ ಈ ಮನೆಗಳ ಹಂಚಿಕೆ ಯಾರಿಗೂ ಆಗಿಲ್ಲ, ಅವರೆಲ್ಲಾ ಅನಧಿಕೃತವಾಗಿ ಸೇರಿಕೊಂಡಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್ : ಅವರು ಅರ್ಜಿಯನ್ನೇ ಹಾಕಿಕೊಂಡಿಲ್ಲ ಡಿಪಾಜಿಟ್‌ನ್ನೂ ಕಟ್ಟಿಲ್ಲ. ಹೌಸಿಂಗ್ ಬೋರ್ಡ್‌ನಿಂದ ಸಾಲವನ್ನು ತೆಗೆದುಕೊಂಡು ಬಂದು ಕಟ್ಟಿರತಕ್ಕ ಮನೆಗಳು ಇವು. ಆದರೆ ಅವರು ಈ ಮನೆಗಳನ್ನು ಪುಗಸಟ್ಟೆ ಎಂದು ತಿಳಿದುಕೊಂಡಿದೆ. ಹಂತಹಂತವಾಗಿ ಪ್ರತಿ ತಿಂಗಳೂ ಇಂತಿಷ್ಟು ಎಂದು ದುಡ್ಡನ್ನು ಕಟ್ಟಬೇಕಾಗುತ್ತದೆ. ಅವರು ಡಿಪಾಜಿಟ್ ಕಟ್ಟಿ ಅರ್ಜಿಯನ್ನು ಹಾಕಿಕೊಂಡಮೇಲೆ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ದಾವಣಗೆರೆ ನಗರಕ್ಕೆ 2ನೇ ಹಂತದ ಭದ್ರಾ ನೀರು ಪೂರೈಕೆ ಯೋಜನೆ.

3226 ಶ್ರೀ ಯಜಮಾನ್ ಮೋತಿ ವೀರಣ್ಣ (ದಾವಣಗೆರೆ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಾವಣಗೆರೆ ನಗರದಲ್ಲಿ ಕುಡಿಯುವ ನೀರಿನ ಅನುಕೂಲಕ್ಕಾಗಿ ನಗರ ನೀರು ಸರಬರಾಜು ಇಲಾಖೆಯವರು ಹದಿಮೂರು ಕೋಟಿ ರೂ. ವೆಚ್ಚದ ಅಂದಾಜಿನಲ್ಲಿ ತಯಾರಿಸಿರುವ ಎರಡನೇ ಹಂತದ ಭದ್ರಾ ನೀರು ಪೂರೈಕೆ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?*

ಆ) *ಹಾಗಿದ್ದಲ್ಲಿ ಪ್ರಸಕ್ತ ವರ್ಷದ ಆಯವ್ಯಯದಲ್ಲಿ ಇದನ್ನು ಸೇರಿಸಲಾಗುವುದೇ?*

ಶ್ರೀ ಕೆ.ಜೆ. ಜಾರ್ಜ್

(ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

ಅ) ಇಲ್ಲ

ಆ) ಈ ಯೋಜನೆಯನ್ನು 1992-93ನೇ ಸಾಲಿನಲ್ಲಿ ಪ್ರಸ್ತಾವಿಸಲಾಗಿದೆ.

ಶ್ರೀ ಯಜಮಾನ್ ಮೋತಿ ವೀರಣ್ಣ : ಮಾನ್ಯ ಅಧ್ಯಕ್ಷರೇ ನಾನು ಕೇಳಿರತಕ್ಕಂಥದ್ದು 2ನೇ ಹಂತದ ಭದ್ರ ಕುಡಿಯುವ ನೀರಿನ ಯೋಜನೆ ಬಗ್ಗೆ ದಾವಣಗೆರೆ ನಗರದಲ್ಲಿ ಕುಡಿಯುವ ನೀರಿನ ಅನುಕೂಲಕ್ಕಾಗಿ ಕರ್ನಾಟಕ ನೀರು ಸರಬರಾಜು ಒಳಚರಂಡಿ ಮಂಡಳಿಯು 13.60 ಲಕ್ಷ ರೂಪಾಯಿಗಳ ಯೋಜನೆ ತಯಾರು ಮಾಡಿ ಇದಕ್ಕೆ ಆಡಳಿತಾತ್ಮಕವಾದಂಥ ಮಂಜೂರಾತಿಯನ್ನು ಪಡೆದು ಈ ವರ್ಷದ ಆಯವ್ಯಯ ಅಂದಾಜು ಬಜೆಟ್‌ನಲ್ಲಿ ಈ ಒಂದು ಯೋಜನೆಯನ್ನು ಸೇರಿಸಿ ಕಾರ್ಯಗತಗೊಳಿಸಬೇಕೆಂದು ಸನ್ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂಡಲಿ ಸಚಿವರನ್ನು ಮನವಿ ಮಾಡಿಕೊಂಡಿದ್ದೆ ತಮಗೆಲ್ಲ ಗೊತ್ತಿರುವ ಹಾಗೆ ದಾವಣಗೆರೆಯ ಜನಸಂಖ್ಯೆ ಬೃಹದ್ಗಾತ್ರವಾಗಿ ಬೆಳೆದು